# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.788/2017

ಸಿಡಬ್ಲ್ಯೂ-7 ಪಿಡಬ್ಲ್ಯೂ-3

| | | |
|---|---|---|
| ಹೆಸರು | : | ಶ್ರೀ ಮರೇಪ್ಪ |
| ತಂದೆಯ ಹೆಸರು | : | ಭೀಮಣ್ಣ ನಾಟೀಕಾರ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತರು |
| ವಾಸ ಸ್ಥಳ | : | ಕಲಬುರಗಿ |

---

ದಿನಾಂಕ 04.12.2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2010 ರಿಂದ 2012 ರವರೆಗೆ ಸೇಡಂ ಅಬಕಾರಿ ವಲಯದಲ್ಲಿ ಅಬಕಾರಿ ರಕ್ಷಕ ಅಂತಾ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ದಿನಾಂಕ 07.05.2012 ರಂದು ನಾನು ಕಚೇರಿಯಲ್ಲಿ ಇದ್ದಾಗ ಇಟಕಲ್ ಗ್ರಾಮದ ಈರಮ್ಮ ಇವರ ಮನೆಯಲ್ಲಿ ಅಕ್ರಮವಾಗಿ ಕಲಬೆರಕೆ ಸೇಂದಿ ಸಂಗ್ರಹಿಸಿದ್ದಾರೆಂದು ಬಾತ್ಮಿ ಬಂದಿದ್ದು ಆಗ ನಮ್ಮ ಸಿಬ್ಬಂದಿ ಹಾಗೂ ಇಬ್ಬರೂ ಪಂಚರನ್ನು ರೆಡಗಾಗಿ ಕರೆದುಕೊಂಡು ಸರಕಾರಿ ವಾಹನ ನಂ.ಕೆಎ-32 ಜಿ-477 ಟಾಟಾ ಸುಮೋದಲ್ಲಿ 04.10 ಗಂಟೆಗೆ ಹೊರಟು ಬಾತ್ಮಿ ಬಂದ ಸ್ಥಳಕ್ಕೆ 05.00 ಗಂಟೆಗೆ ತಲುಪಿರುತ್ತೇವೆ. ಆಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿದಂತೆ ಒಬ್ಬ ಮಹಿಳೆ ಸ್ಥಳದಿಂದ ಓಡಿ ಹೋಗಿದ್ದು, ಆತಳನ್ನು ಹಿಡಿಯಲು ಪ್ರಯತ್ನಿಸಿದ್ದು, ಆದರೆ ಅವಳು ಸಿಕ್ಕಿಲ್ಲ. ನಂತರ ನಾನು ಆಕೆಯ ಮನೆಯನ್ನು ಪ್ರವೇಶ ಮಾಡಿ ಒಂದು ಮೂಲೆಯಲ್ಲಿ ಇದ್ದ 3 ಪ್ಲಾಸ್ಟಿಕ ಕೊಡಗಳನ್ನು ತೆಗೆದುಕೊಂಡಿದ್ದು ಅದರಲ್ಲಿ ಬಿಳಿಯ ಬಣ್ಣದ ಗಾಟು ವಾಸನೆವುಳ್ಳ ದ್ರವ ಇತ್ತು. ಪ್ರತಿ ಕೊಡದಲ್ಲಿ ಒಟ್ಟು 10 ಲೀ.ದಂತೆ ಒಟ್ಟು 30 ಲೀ. ಕಲಬೆರಕೆ ಸೇಂದಿ ಇತ್ತು. ಆಗ ನಾನು ಹಾಜರಿದ್ದ ಪಂಚರ ಸಮಕ್ಷಮದಲ್ಲಿ ಒಂದು 180 ಎಮ್.ಎಲ್.ನ ಒಂದು ಬಾಟಲಿಯಲ್ಲಿ ಸದರಿ ಕಲಬೆರಕೆ ಸೇಂದಿಯನ್ನು ಹಾಕಿ ಅವುಗಳಿಗೆ ದಾರದಿಂದ ಕಟ್ಟಿ ಇಲಾಖ ಸಂಖ್ಯೆ 444 ಎಂದು ಬರೆದು ಪಂಚರ ಸಹಿವುಳ್ಳ ಚೀಟಿಯನ್ನು ಹಚ್ಚಿದ್ದು ಇರುತ್ತದೆ. ನೆರೆದಿದ್ದ ಜನರಿಗೆ ಓಡಿ ಹೋದ ಮಹಿಳೆಯ ಹೆಸರು ಕೇಳಿದ್ದು ಆಗ ಅವರು ಆಕೆಯ ಹೆಸರು ಈರಮ್ಮ ಗಂಡ ಬಸವಂತರಾವ, ವಃ 58 ಅಂತಾ ತಿಳಿಸಿರುತ್ತಾರೆ. ಸ್ಥಳದಲ್ಲಿಯೇ 05.00 ಗಂಟೆಯಿಂದ 06.00 ಗಂಟೆಯವರಗೆ ಪಂಚನಾಮೆಯನ್ನು ಬರೆದು ಅದಕ್ಕೆ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಆ ದಿವಸ ಓಡಿ ಹೋದ ಮಹಿಳೆಯನ್ನು ಈಗ ನೋಡಿದ್ದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಬಾಟಲಿಯನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ. ನಂತರ ಕಚೇರಿಗೆ ಬಂದು ಪಂಚನಾಮೆಯ ಆಧಾರದ ಮೇಲಿಂದ

ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ಗುರುತಿಸುತ್ತಿದ್ದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಂತರ ಸಾಕ್ಷಿದಾರರಾದ ಬೋಗಪ್ಪ ಅಸಂಗಿಹಾಳ ಹಾಗೂ ಮಹಾದೇವಪ್ಪ ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 26.07.2012 ರಂದು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮು.ಮಾ.ನ್ನು ನಮ್ಮ ಸಿಬ್ಬಂದಿ ಬಸವರಾಜ ಇವರ ಮೂಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 28.07.2012 ರಂದು ವರದಿ ಬಂದಿದ್ದು ಸದರಿ ವರದಿಯಲ್ಲಿ ಸೇಂದಿ ಮಾನವನ ಸೇವನೆಗೆ ಯೋಗ್ಯವಿರುವುದಿಲ್ಲ ಎಂದು ವರದಿ ಬಂದಿರುತ್ತದೆ. ವರದಿಯನ್ನು ನಿಪಿ-4 ಎಂದು ಗುರುತಿಸಲಾಯಿತು. ನಂತರ ಆರೋಪಿತಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿನಾಂಕ 27.07.2012 ರಂದು ಮಾದರಿ ಸಹಿ ಮತ್ತು ಶಿಲು ತಯಾರಿಸಿರುತ್ತೇನೆ. ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ</u>**

ನಾನು ಸರಕಾರದ ತರ್ಫೆ ದೂರನ್ನು ದಾಖಲಿಸಿಲ್ಲ. ಇಟಕಲ ಗ್ರಾಮದಲ್ಲಿ 400 ರಿಂದ 500 ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಮನೆಗಳಿಗೆ ಪಂಚಾಯತಿಯವರು ನಂಬರ ನೀಡಿರುತ್ತಾರೆ ಎಂದರೆ ಇರಬಹುದು. ಘಟನಾ ಸ್ಥಳ ಆರೋಪಿಯದು ಎಂದು ತೋರಿಸುವ ಸಲುವಾಗಿ ನಾನು ಯಾವುದೇ ಕಾಗದ ಪತ್ರ ಗಳನ್ನು ಪಡೆದುಕೊಂಡಿಲ್ಲ ನಾನು ರೆಡಗೆಂದು ಹೋದಾಗ ಅಲ್ಲಿ 8-10 ಜನ ಸಾರ್ವಜನಿಕರು ಸೇರಿದ್ದರು. ನಾನು ಸಾರ್ವಜನಿಕರ ಹೇಳಿಕೆ ಪಡೆಯಲು ಪ್ರಯತ್ನಿಸಿದ್ದು ಆದರೆ ಅವರು ಹೇಳಿಕೆ ನೀಡಲು ನಿರಾಕರಿಸಿರುತ್ತಾರೆ. ವಾಹನ ಚಾಲಕನ ಹೇಳಿಕೆ ಪಡೆದುಕೊಂಡಿಲ್ಲ. ಪಂಚನಾಮೆಯಲ್ಲಿ ಚಕ್ಕುಬಂದಿ ತೋರಿಸಿದ್ದು ಆದರೆ ಮನೆಯ ನಂಬರ ತೋರಿಸಿಲ್ಲ. ನಾನು ಖಚಿತ ಬಾತ್ಮಿ ಮೇರೆಗೆ ಆ ದಿವಸ ಆರೋಪಿ ಮನೆಯ ಮೇಲೆ ಅಬಕಾರಿ ರೆಡ್ ಮಾಡಿರುವುದಾಗಿ ಮತ್ತು ಆರೋಪಿಯ ಮನೆಯಿಂದ 30 ಲೀ. ಸೇಂದಿ ಜಪ್ತಿಪಡಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಮು.ಮಾ.1 ರಂತೆ ಸೇಂದಿಯನ್ನು ರಾಸಾಯನಿಕ ಪರೀಕ್ಷೆ ಸಲುವಾಗಿ ಪ್ರತ್ಯೇಕವಾಗಿ ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಂತೆ ಇರುವ ಬಾಟಲಿಗಳು ನಮ್ಮ ಇಲಾಖೆಯ ಅಧಿಕೃತ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ನಮ್ಮ ಇಲಾಖೆಯವರು ನಮಗೆ ಪ್ರಕರಣಗಳ ಬಗ್ಗೆ ಮಾಹಿತಿ ಕೇಳುತ್ತಾರೆ ಎಂದರೆ ಸರಿ. ಸಾಕ್ಷಿ ಪ್ರಕರಣಗಳ ಪ್ರಗತಿಯ ಬಗ್ಗೆ ಮಾತ್ರ ವಿಚಾರಿಸುತ್ತಾರೆ ಆದರೆ ಎಷ್ಟು ರೆಡ ಮಾಡಿರುತ್ತಿರಿ ಎಂದು ವಿಚಾರಿಸುವುದಿಲ್ಲ ಎಂದು ನುಡಿಯುತ್ತಾರೆ. ಆ ದಿವಸ 05.00 ರಿಂದ

06.00 ಗಂಟೆಯವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಕೈಗೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಅಬಕಾರಿ ರಕ್ಷಕರ ಹೇಳಿಕೆಗಳನ್ನು ಪಡೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಸಿಬ್ಬಂದಿಯವರ ಮೂಲಕ ಜಪ್ತುಪಡಿಸಿಕೊಂಡ ಮು.ಮಾ.ನ್ನು ರಾಸಾಯನಿಕ ಪರೀಕ್ಷೆ ಸಲುವಾಗಿ ಕಳುಹಿಸಿಕೊಟ್ಟಿರುವುದಾಗಿ ಮತ್ತು ವರದಿ ಪಡೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಇಲಾಖೆಯ ಅಂಕಿ-ಸಂಖ್ಯೆಗಳನ್ನು ಜಾಸ್ತಿ ತೋರಿಸುವ ಸಲುವಾಗಿ ಆರೋಪಿತಳ ವಿರುದ್ಧ ಯಾವುದೇ ಸಾಕ್ಷಾದಾರಗಳು ಲಭ್ಯವಿಲ್ಲದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಈಗ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಆರೋಪಿಗೂ ಏನು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ದಿವಸ ಆರೋಪಿಯ ಮನೆಯಿಂದ ಪಂಚರ ಸಮಕ್ಷಮ 30 ಲೀ. ಸೇಂದಿ ಜಪ್ತುಪಡಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH*